## ಹಾಲಿಡೇ

ಸುಮಾರು ನಲವತ್ತು ವರ್ಷಗಳ ಹಿಂದಿನ ಮಾತು. ಧಾರವಾಡ ಜಿಲ್ಲೆಯ ವಿಧಾನಸಭಾ ಕ್ಷೇತ್ರ ಒಂದರಿಂದ ಸ್ಪರ್ಧಿಸಿ, ನಮ್ಮ ಪರಿಚಿತರೊಬ್ಬರು ಆರಿಸಿ ಬಂದರು. ಅವರಿಗೆ ಓದಲು ಬರೆಯಲು ಬಾರದು ಎನ್ನುವ ಸಂಗತಿ ಎಲ್ಲರಿಗೂ ಗೊತ್ತಿತ್ತು. ಈ ಶಾಸಕರು ತಮ್ಮ ಹಿಂಬಾಲಕರೊಂದಿಗೆ ಒಮ್ಮೆ ಬೆಂಗಳೂರಿಗೆ ಹೋಗುತ್ತಿದ್ದರು. ದಾರಿಯಲ್ಲಿ ತಿಂಡಿ ಮಾಡಲು ಹೋಟೆಲ್ ಮುಂದೆ ಕಾರು ನಿಲ್ಲಿಸಿ ಒಳಗೆ ಹೋದರು. ಅವರಿಗೆ ಮೆನು ಓದಲು ಬರುತ್ತಿರಲಿಲ್ಲವಾದ್ದರಿಂದ ಎಲ್ಲೇ ಹೋದರೂ 'ಏನಿದೆ ತಿನ್ನೋಕೆ?' ಎಂದು ಕೇಳುತ್ತಿದ್ದರು. ಹಾಗೇ ಅಂದೂ ಕೇಳಿದರು. ವೇಟರ್, 'ಈ ದಿನ ಹಾಲಿಡೇ ಸರ್' ಎಂದಿದ್ದಕ್ಕೆ ನಮ್ಮ ಶಾಸಕರು, 'ಸರಿ, ಅದನ್ನೇ ನಾಲ್ಕು ಪ್ಲೇಟ್ ಕೊಡಪ್ಪ' ಎಂದರು.

**ಪ್ರಕಾಶ್ ಮಲ್ಕಿಒಡೆಯರ್**





## ಸಿಮ್ ಕಾರ್ಡ್ ಹಾಕಿ

ಪ್ರತಿದಿನ ಆಫೀಸಿಗೆ ಹೋಗುವಾಗ ನನ್ನ ಬ್ಯಾಗ್ ಎಲ್ಲಿ, ನನ್ನ ಪರ್ಸ್ ಎಲ್ಲಿ, ವಾಚು ಸಿಗ್ತಾ ಇಲ್ಲ... ಅಂತೆಲ್ಲಾ ಮಡದಿಗೆ ಕೇಳುತ್ತಿರುತ್ತೇನೆ. ಆವತ್ತು ಎಲ್ಲವೂ ಸಿಕ್ಕ ಮೇಲೆ ತಿಂಡಿ ತಿನ್ನುತ್ತ, ಟೀವಿ ಆನ್ ಮಾಡೋಣ ಎಂದರೆ ರಿಮೋಟ್ ಸಿಗಲಿಲ್ಲ! ತುಸು ರೇಗುತ್ತಲೇ ರಿಮೋಟ್‌ಗಾಗಿ ತಡಕಾಡಿದೆ. ಕೇಳಿದ್ದನ್ನೆಲ್ಲಾ ತಂದುಕೊಟ್ಟು ಅವಳಿಗೂ ಸಾಕಾಯ್ತು. ಇದೆಲ್ಲವನ್ನೂ ನೋಡುತ್ತಿದ್ದ ನನ್ನ ಮಗ ಗಣಪ, 'ಅಪ್ಪ, ನಿಮ್ಮ ಕಷ್ಟ ನೋಡಲು ಆಗುತ್ತಿಲ್ಲ, ದಯವಿಟ್ಟು ನಿಮ್ಮ ಎಲ್ಲಾ ವಸ್ತುಗಳಿಗೂ ಒಂದೊಂದು ಸಿಮ್ ಕಾರ್ಡ್ ಹಾಕಿಸಿ ಬಿಡಿ. ಸಿಗದೇ ಇದ್ದಾಗ ಮಿಸ್ ಕಾಲ್ ಕೊಟ್ಟು ಹುಡುಕಬಹುದು' ಎಂದ!

**ಹರವೆ ಸಂಗಣ್ಣ ಪ್ರಕಾಶ್**